# ವಿದ್ವಾನ್ ಎನ್. ರಂಗನಾಥ ಶರ್ಮಾ

---

**ಡಾ. ಡಿ. ವಿ. ರಾವ್**

"ವನಸುಮದೊಲೆನ್ನ ಜೀವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೆ–ಹೇ ದೇವ
ಜನಕೆ ಸಂತಸವೀವ ಘನನು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ
ಕಾನನದಿ ಮಲ್ಲಿಗೆಯು ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ ತಾನೆಲೆಯ ಮರೆಯಿರ್ಪ
ದೀನತೆಯು ತೋರಿ ಅಭಿಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ–"

ಕೀರ್ತಿಶೇಷರಾದ ಮಾನ್ಯ ಡಿ. ವಿ. ಗುಂಡಪ್ಪನವರ 'ವನಸುಮ' ಎಂಬ ಪದ್ಯದ ಮೇಲಿನ ಸಾಲುಗಳು ಶ್ರೀ ರಂಗನಾಥಶರ್ಮರ ಜೀವನದ ಸಾರವನ್ನು ಪ್ರತಿಬಿಂಬಿಸುತ್ತವೆ ಎಂದು ನನ್ನ ಮನೋಭಾವ.

ಶ್ರೀ ರಂಗನಾಥಶರ್ಮಾರನ್ನು ನಾನು ಮೊದಲು ಕಂಡದ್ದು ಸುಮಾರು ಅರ್ಧ ಶತಮಾನಕ್ಕೂ ಹಿಂದೆ. ಆಗ ಅವರು ವಿದ್ಯಾರ್ಥಿದೆಸೆಯಲ್ಲಿದ್ದರು. ಬೆಂಗಳೂರಿನ ಬಸವನಗುಡಿ ಬಡಾವಣೆಯಲ್ಲಿರುವ ವ್ಯಾಸ ಮಂದಿರದಲ್ಲಿ ಇದ್ದರು. ಚಕ್ಕಂಬಟ್ಟಲು ಹಾಕಿ ನೆಟ್ಟಗೆ ಕುಳಿತು ಮುಂದೆ ಕಾಲುಮಣೆಯ ಮೇಲಿದ್ದ ಪುಸ್ತಕವನ್ನು ಓದುವುದರಲ್ಲಿ ತಲ್ಲೀನರಾಗಿದ್ದರು. ಸದೃಢವಲ್ಲದ ಶರೀರ, ತಲೆಯ ಮೇಲೆ ಶಿಖೆ, ಎಡಹೆಗಲ ಮೇಲಿಂದ ಇಳಿದ ಯಜ್ಞೋಪವೀತ, ತಲೆ ಎತ್ತಿ ನೋಡಿದಾಗ ಅವರ ಕಣ್ಣುಗಳಲ್ಲಿ ಕಂಡ ಶುಭ್ರ ಕಳೆ. ಅಂದು ನನ್ನ ಮೊದಲ ನೋಟಕ್ಕೆ ಕಂಡುದು ಇಂದೂ ನೆನಪಿಗೆ ಬರುತ್ತದೆ. ಅಂದಿನಿಂದ ಹಲವು ಬಾರಿ ಅವರನ್ನು ಕಂಡಿದ್ದೇನೆ. ಜೀವನದಲ್ಲಿ ಅವರು ಅನುಭವಿಸಿದ ಕಷ್ಟ ಸುಖಗಳ ಸಂಗತಿಗಳನ್ನು ಕೇಳಿದ್ದೇನೆ, ಅವರ ವಿದ್ಯಾಭಿವೃದ್ಧಿ,

ಸ್ಥಾನಮಾನ, ಕೃತಿ ರಚನೆ, ಪ್ರಸಿದ್ಧಿ ಪ್ರಶಸ್ತಿಗಳ ಕುರಿತು ತಿಳಿದುಕೊಂಡಿದ್ದೇನೆ. ವಿದ್ಯಾಭ್ಯಾಸದಲ್ಲಿ, ಜೀವನದಲ್ಲಿ ಶುದ್ಧ ಚಾರಿತ್ರ್ಯದಲ್ಲಿ, ದೈವ ಭಕ್ತಿಯಲ್ಲಿ, ಸದ್ಗುಣಗಳಲ್ಲಿ, ನ್ಯಾಯ ನಡತೆಗಳಲ್ಲಿ ಅವರಿಗಿರುವ ಅಚಲ ಆಸಕ್ತಿ, ಅದಮ್ಯಶ್ರದ್ಧೆ, ಅಮಿತ ಉತ್ಸಾಹ ಮತ್ತು ಯೋಗ್ಯ, ಅವಶ್ಯಕ, ಸಾಧ್ಯ ಎಂಬ ಕರ್ತವ್ಯಗಳಲ್ಲಿ ಇರುವ ಛಲ, ಈ ಗುಣಗಳನ್ನು ನಾನು ಮೆಚ್ಚಿಕೊಂಡಿದ್ದೇನೆ.

ಈಗ ಅವರ ಹಿತೈಷಿಗಳೂ, ಅಭಿಮಾನಿಗಳೂ, ಸ್ನೇಹಿತರೂ ಆದ ಕೆಲವು ಮಹನೀಯರು ಒಟ್ಟಾಗಿ ಅವರಿಗೆ ಒಂದು ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಅದು ಅವಶ್ಯವಾದ ಮತ್ತು ಸ್ತುತ್ಯವಾದ ಕಾರ್ಯ. ಪ್ರಶಂಸನೀಯವಾದುದೂ ಆಗಿದೆ.

ಭಾರತೀಯರು ಪ್ರಾಚೀನ ಕಾಲದಿಂದಲೂ ಅಧ್ಯಯನಾಸಕ್ತರು, ಮತ್ತು ಚಿಂತನಶೀಲರು. ಅಧ್ಯಯನವು ತೇಜಸ್ಸಿನಿಂದ ಕೂಡಿರಬೇಕೆಂಬುದು ಅವರ ಧ್ಯೇಯ. ಧ್ಯೇಯ ಇದ್ದರೆ ಮಾತ್ರ ತೇಜಸ್ಸು ಬರಲಾರದು. ಒಮ್ಮನದ ಪ್ರಾರ್ಥನೆಯೊಂದಿಗೆ ಶ್ರದ್ಧಾ ಭಕ್ತಿಗಳಲ್ಲದೆ ಜೀವನ ಯೋಗವೂ ಮಿಳಿತಗೊಂಡಿರಬೇಕು. ಪ್ರಾರ್ಥನೆ ಮತ್ತು ಜೀವನಯೋಗದ ಸಂಮಿಳನವೆ ವೈಚಾರಿಕತೆ ಎಂದು ವಿನೋಬಾಜಿ ಹೇಳಿರುವರು. ಜೀವನ ಧರ್ಮವು ಚಿಂತನಗಳೊಂದಿಗೆ ಮೇಳವಿಸಿಕೊಳ್ಳದೆ ಇದ್ದರೆ ಅಧ್ಯಯನವು ವಿಚಾರ ಹೀನವಾಗಿ ಸತ್ವಹೀನವಾಗುವುದು. ಚಿಂತನೆ, ಅಧ್ಯಯನ, ಚರ್ಚೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಡಿ.ವಿ.ಜಿ.ಯವರು ಬೆಂಗಳೂರಿನಲ್ಲಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿದರು. ಶ್ರೀ ರಂಗನಾಥಶರ್ಮರು ಅದರ ನಿಕಟ ಸಂಪರ್ಕವನ್ನು ಇಟ್ಟುಕೊಂಡ ಕ್ರಿಯಾಶೀಲವ್ಯಕ್ತಿ.

ಶ್ರೀ ರಂಗನಾಥಶರ್ಮ ಅವರು ಶಿವಮೊಗ್ಗ ಜಿಲ್ಲಾ ಸೊರಬ ತಾಲ್ಲೂಕಿನ ನಡಹಳ್ಳಿ ಎಂಬ ಗ್ರಾಮದಲ್ಲಿ 7-4-1916ರಲ್ಲಿ ಜನಿಸಿದರು. ಅವರದು ಹವ್ಯಕ ಬ್ರಾಹ್ಮಣ ಮನೆತನ. ದಿವಂಗತರಾದ ಅವರ ತಾಯಿ ಶ್ರೀಮತಿ ಜಾನಕಮ್ಮ ಮತ್ತು ತಂದೆ ಶ್ರೀ ತಿಮ್ಮಪ್ಪನವರು ಸಜ್ಜನರು. ಕೃಷಿಕ ವೃತ್ತಿಯಲ್ಲಿದ್ದರು. ಶ್ರೀ ರಂಗನಾಥಶರ್ಮರಿಗೆ ನಾಲ್ಕು ಜನ ಅಣ್ಣ ತಮ್ಮಂದಿರು, ನಾಲ್ವರು ಅಕ್ಕತಂಗಿಯರು ತುಂಬಿದ ಕುಟುಂಬದಲ್ಲಿ ಬೆಳೆದ ಅವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ನಡಹಳ್ಳಿ ಮತ್ತು ಸೊರಬದಲ್ಲಿ ಮುಗಿಸಿದರು.

ಸಮೃದ್ಧ ಬೆಳೆಯು ಬಂದಾಗ ಅದು ಬೆಳೆದ ನೆಲ ಫಲವತ್ತಾಗಿರುವುದು ಸಹಜವಲ್ಲವೆ ? ಶ್ರೀರಂಗನಾಥಶರ್ಮರ ತಂದೆಯವರು ವಿದ್ಯಾಭಿಲಾಷಿಗಳು. ಆಗ ಕನ್ನಡದಲ್ಲಿ ಲಭ್ಯವಾಗಿದ್ದ ವೇದಾಂತ ಪುಸ್ತಕಗಳನ್ನು ಓದಿ ಮನನ ಮಾಡಿಕೊಂಡ, ಕರ್ಮಕಾಂಡವನ್ನು ಅರಿತು ಆಚರಿಸಿಕೊಂಡು ಬಂದ ಕರ್ಮಠ. ಶ್ರೀರಂಗನಾಥಶರ್ಮರ ಚಿಕ್ಕಪ್ಪಂದಿರಾದ ದಿ|| ವೆಂಕಪ್ಪನವರು ಆ ಕಾಲದ ಒಬ್ಬ ಅಪ್ರತಿಮ ಪ್ರತಿಭಾವಂತ,

ಆಡುಮುಟ್ಟದ ಸೊಪ್ಪಿಲ್ಲ ಎಂಬ ನಾಡನುಡಿ ಅವರಿಗೆ ಅನ್ವಯವಾಗುತ್ತಿತ್ತು. ಅವರು ಸ್ವಂತ ವ್ಯಾಸಂಗದಿಂದಲೇ ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಕಲಿತು ತಿಳಿದವರು. ತರ್ಕವ್ಯಾಕರಣಾದಿ ಶಾಸ್ತ್ರಗಳನ್ನು ವಿಧಿವತ್ತಾಗಿ ಅಧ್ಯಯನ ಮಾಡಿರದಿದ್ದರೂ ಅವುಗಳಲ್ಲಿ ಅವರ ಪಾಂಡಿತ್ಯಕ್ಕೇನೂ ಕೊರತೆ ಇರಲಿಲ್ಲ. ಸಂಸ್ಕೃತದಲ್ಲಿ ಅವರ ಕವಿತಾ ಸಾಮರ್ಥ್ಯ ಶ್ಲಾಘನೀಯವಾಗಿತ್ತು. ಬಹುಶಃ ತಮಗೇ ಅರಿವಾಗದಂತೆ ಶ್ರೀರಂಗನಾಥಶರ್ಮರು ಅವರಿಂದ ಪ್ರಭಾವಿತರಾಗಿರಬೇಕು.

ಆಗ ಇಂಗ್ಲಿಷ್ ಭಾಷೆಗೆ ಬಹಳ ಗೌರವ ಮತ್ತು ಪ್ರಾಧಾನ್ಯಸ್ಥಾನ ಇತ್ತು. ಸ್ನಾತಕೋತ್ತರ ಪದವಿಗಳಾದ ಬಿ.ಎ., ಎಂ.ಎ. ಮೊದಲಾದವುಗಳು ವಿದ್ಯಾರ್ಥಿಗಳ ಗುರಿ, ಗಮನವಾಗಿತ್ತು. ಬಾಲಕ ರಂಗನಾಥನಿಗೆ ಅಂತಹ ಆಸೆ ಇದ್ದುದೇನೂ ಹೆಚ್ಚಲ್ಲ. ಆದರೆ ಪರಿಸ್ಥಿತಿ ಪೂರಕವಾಗಿರಲಿಲ್ಲ. ಸೊರಬದ ಹತ್ತಿರ ಎಲ್ಲೂ ಹೈಸ್ಕೂಲು ಕಾಲೇಜುಗಳಿರಲಿಲ್ಲ. ಪರಸ್ಥಳಕ್ಕೆ ಹೋಗಿ ವ್ಯಾಸಂಗ ಮಾಡಬೇಕು ಎಂದರೆ ಅಲ್ಲಿ ಊಟ ವಸತಿಗಳ ವ್ಯವಸ್ಥೆಗಳಾಗಬೇಕು. ಅಂತಹ ಖರ್ಚುವೆಚ್ಚಗಳ ಭಾರವನ್ನು ಹೊರಲು ಅವರ ತಂದೆಯವರಿಗೆ ಶಕ್ತಿ ಇರಲಿಲ್ಲ. ದೊಡ್ಡ ಕುಟುಂಬ. ಆದಾಯ ಬಹಳ ಪರಿಮಿತ. ಸಂಸಾರದ ವೆಚ್ಚ ಅಧಿಕ. ಆದ್ದರಿಂದ ಬಾಲಕ ರಂಗನಾಥನಿಗೆ ಅವನು ಬಯಸಿದ ಇಂಗ್ಲಿಷ್ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ.

ಹೇಗಾದರೂ ವಿದ್ಯಾಭ್ಯಾಸವನ್ನು ಮುಂದುವರಿಸಲೇಬೇಕೆಂಬ ಅದಮ್ಯ ಆಕಾಂಕ್ಷೆ ರಂಗನಾಥನದು. ಮನಸ್ಸಿದ್ದರೆ ಮಾರ್ಗ ಇದೆ. ಅಗಡಿ ಆನಂದವನದಿಂದ ಸದ್ಬೋಧ ಚಂದ್ರಿಕೆ ಎಂಬ ಮಾಸಪತ್ರಿಕೆ ಪ್ರಕಟವಾಗುತ್ತಿತ್ತು. ಆ ಕಾಲದ ಜನಪ್ರಿಯ ಮಾಸಪತ್ರಿಕೆ ಅದು. ಆನಂದವನದ ಆಶ್ರಮದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡುವವರಿಗೆ ಉಚಿತವಾಗಿ ಊಟ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡುವುದಾಗಿ ಸದ್ಬೋಧ ಚಂದ್ರಿಕೆಯಲ್ಲಿ ಪ್ರಕಟವಾಗಿತ್ತು. ರಂಗನಾಥನ ವಿದ್ಯಾಭ್ಯಾಸದ ಹಂಬಲು ಗರಿಗೆದರಿ ಆಕಾಶಕ್ಕೆ ಹಾರಿತು. ಅದೇ ಕ್ಷಣ ಕಾರ್ಯತತ್ಪರನಾದ ರಂಗನಾಥ ಆನಂದವನಕ್ಕೆ ಪತ್ರ ಬರೆದ. ಅಲ್ಲಿಗೆ ಬರಬಹುದೆಂದು ವ್ಯವಸ್ಥಾಪಕರ ಪತ್ರವೂ ಬಂದಿತು. ಬಾಲಕ ರಂಗನಾಥ ಕರ್ತವ್ಯನಿಷ್ಠ. ತಂದೆ ತಾಯಿಗಳ ಒಪ್ಪಿಗೆಯನ್ನು ಕೇಳಿಪಡೆದುಕೊಂಡು ಆನಂದವನ ಆಶ್ರಮಕ್ಕೆ ಹೋದ.

ವಿಧಿಯು ಶ್ರೀರಂಗನಾಥಶರ್ಮರ ಸಂಸ್ಕೃತಾಭ್ಯಾಸದ ಉಜ್ವಲಭವಿಷ್ಯಕ್ಕೆ ಅಂದು ಅಸ್ತಿವಾರ ಹಾಕಿತು. ಅಲ್ಲದೆ ಅದು ಸಂಸ್ಕೃತದ ಬಗ್ಗೆ ರಂಗನಾಥರ ಮನಸ್ಸಿನಲ್ಲಿ ಅಚಲವಾದ ಒಲವನ್ನು ಮೂಡಿಸಿತು.

"ಸಂಸ್ಕೃತ ಅಧ್ಯಯನ ಮಾಡುವಾಗ ಒಂದು ಗೊತ್ತಾದ ಮಾರ್ಗದಲ್ಲಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದರ ಕುರಿತು ಪೂರ್ವಭಾವಿಯಾಗಿ ನೀವು ಚಿಂತಿಸಿದ್ದಿರಾ ? ನಿಮ್ಮ ಭವಿಷ್ಯದ ಯೋಜನೆ ಹೇಗಿತ್ತು ?" ಎಂದು ನಾನು ಕೇಳಿದುದಕ್ಕೆ ಶ್ರೀರಂಗನಾಥ ಶರ್ಮರು ಕ್ಷಣಕಾಲ ಮೌನವಾಗಿದ್ದು ಹೇಳಿದರು :

"ಭವಿಷ್ಯ ಜೀವನದ ವಿಷಯವಾಗಿ ಚಿಂತಿಸುವಷ್ಟು ವಯಸ್ಸಾಗಲೀ, ತಿಳಿವಳಿಕೆಯಾಗಲೀ ಆಗ ನನಗೆ ಇರಲಿಲ್ಲ. ಪ್ರಸ್ತುತ ಅಧ್ಯಯನದ ಕಡೆ ಮಾತ್ರ ನನ್ನ ಗಮನವಿತ್ತು. ಅನಂತರ ಸಂಸ್ಕೃತದಲ್ಲಿ ಪ್ರೌಢಾಧ್ಯಯನ ಮಾಡುವಾಗ ಅದರ ಆಲೋಚನೆ ಬಂದದ್ದುಂಟು. ಇಂಗ್ಲಿಷ್ ಕಲಿತು ಪದವಿ ಸಂಪಾದಿಸಿದವರೂ ಕೆಲಸವಿಲ್ಲದೆ ಅಲೆಯುತ್ತಿರುವುದನ್ನು ಕಂಡಿದ್ದೆ. ಹೇಗೋ ಜೀವನ ನಡೆಯುವುದೆಂಬ ನಂಬಿಕೆ ರಕ್ಷಾ ಕವಚವಾಯಿತು. ಮಹತ್ತರವಾದ ಆಸೆಯನ್ನೇನೂ ನಾನು ಇಟ್ಟುಕೊಂಡಿರಲಿಲ್ಲ."

ಆನಂದವನದಲ್ಲಿ ಅಧ್ಯಯನ ಮಾಡಿಕೊಂಡಿದ್ದ ಬಾಲಕ ರಂಗನಾಥನಿಗೆ ಆ ಬಯಲುಸೀಮೆಯ ಹವಾಗುಣ, ಆಹಾರಗಳು ಒಗ್ಗಲಿಲ್ಲ. ಅನಿವಾರ್ಯವಾಗಿ ಪರಿಸ್ಥಿತಿಯ ಒತ್ತಡದಿಂದ ಅವನು ಮನೆಗೆ ಮರಳಿದ. ಆನಂದವನದಲ್ಲಿ ಅವನಿಗೆ ಹೆಚ್ಚೇನದೇನನ್ನೂ ಕಲಿಯುವುದಾಗಲಿಲ್ಲ. ಮನೆಗೆ ಮರಳಿದ ಮೇಲೆ ಅವನ ದೈಹಿಕ ಆರೋಗ್ಯ ಸುಧಾರಿಸಿತು. ಆದರೆ ಮುಂದಿನ ವಿದ್ಯಾಭ್ಯಾಸದ ಚಿಂತೆ ಮನಸ್ಸನ್ನು ಪೀಡಿಸತೊಡಗಿತು. ಮುಂದಿನ ದಾರಿ ಹುಡುಕಲು ಪ್ರಯತ್ನಿಸಿತು. ಆಗ ಸಾಗರ ತಾಲ್ಲೂಕು ಕೆಳದಿಯಲ್ಲಿ ಸಂಸ್ಕೃತ ಪಾಠಶಾಲೆ ನಡೆಯುತ್ತಿತ್ತು. ಹೊಸಹಳ್ಳಿ–ಮತ್ತೂರಿನ ವೇ॥ ಕೇಶವಶಾಸ್ತ್ರಿ ಮತ್ತು ವೇದಮೂರ್ತಿ ನಾರಾಯಣಶಾಸ್ತ್ರಿಗಳು ಅಲ್ಲಿ ಉಪಾಧ್ಯಾಯರಾಗಿದ್ದರು. ಅಲ್ಲಿ ಸಂಸ್ಕೃತ ಮತ್ತು ವೇದಪಾಠ ಚೆನ್ನಾಗಿ ನಡೆಯುತ್ತಿತ್ತು. ಈ ವಿಷಯ ತಿಳಿದ ರಂಗನಾಥ ಅಲ್ಲಿಗೆ ಹೋಗಲು ಅಪ್ಪಣೆ ಪಡೆದ. ಕೆಳದಿಯಲ್ಲಿ ಪಾಠಶಾಲೆಗೆ ಸೇರಿದೊಡನೆ ಶಾಸ್ತ್ರಿಗಳ ಮತ್ತು ಸ್ಥಳೀಕರ ಔದಾರ್ಯದಿಂದ ಊಟ ವಸತಿ ಸೌಕರ್ಯಗಳು ದೊರೆತವು. ಇತ್ತೀಚೆಗೆ ಕೆಳದಿಯಲ್ಲಿ ಅವರ ರಾಮಾಯಣ ವಾಚನ ಮತ್ತು ಸನ್ಮಾನ ಸಮಾರಂಭದಲ್ಲಿ ಅವರು, ತಾವು ಬಾಲ್ಯದಲ್ಲಿ ಕೆಳದಿ–ಹಾರೇಗೊಪ್ಪದಲ್ಲಿ ವಿದ್ಯಾರ್ಥಿಯಾಗಿದ್ದುದನ್ನು ನೆನಪಿಸಿಕೊಂಡು ಅಲ್ಲಿನ ಜನರಿಗೆ ಕೃತಜ್ಞತೆಯನ್ನು ಅರ್ಪಿಸಿದ್ದು ಅವರ ಭವ್ಯ ವ್ಯಕ್ತಿತ್ವದ ಲಕ್ಷಣವನ್ನು ಎತ್ತಿ ತೋರಿಸಿತ್ತು.

ಅಲ್ಲಿಂದ ಮುಂದೆ ತಮ್ಮ ವಿದ್ಯಾಭ್ಯಾಸವನ್ನು ಕುರಿತು ಶ್ರೀರಂಗನಾಥ ಶರ್ಮ ಹೇಳುತ್ತಾರೆ :

"ಆ ಪಾಠಶಾಲೆಯಲ್ಲಿ ಮೂರು ವರ್ಷ ಕಾಲ ನನ್ನ ವ್ಯಾಸಂಗ ನಡೆಯಿತು. ನನ್ನ ಸಂಸ್ಕೃತಾಭ್ಯಾಸ ಆರಂಭ ಆದದ್ದು ಅಲ್ಲಿಯೇ ಎನ್ನುವುದು ಸೂಕ್ತ. ಇಬ್ಬರು ಶಾಸ್ತ್ರಿಗಳೂ ಚೆನ್ನಾಗಿ ಆಸಕ್ತಿಯಿಂದ ಪಾಠ ಹೇಳುತ್ತಿದ್ದರು. ನನ್ನ ಮೇಲೆ ಅವರಿಗೆ ವಿಶೇಷ ವಾತ್ಸಲ್ಯವಿತ್ತು. ಮೈಸೂರು ಸರ್ಕಾರವು ನಡೆಸುತ್ತಿದ್ದ ಸಂಸ್ಕೃತ ಪರೀಕ್ಷೆಗಳಲ್ಲಿ ಪ್ರಥಮ ಪರೀಕ್ಷೆಗೆ ಕುಳಿತೆ. ಪರೀಕ್ಷಾಕೇಂದ್ರ ಸಾಗರದಲ್ಲಿತ್ತು. ಪರೀಕ್ಷೆಗೆ ಕುಳಿತ 6 ಜನ ವಿದ್ಯಾರ್ಥಿಗಳಲ್ಲಿ ನಾನೊಬ್ಬನೇ ತೇರ್ಗಡೆಯಾದವನು. ಇದರಿಂದ ಅಧ್ಯಾಪಕ ಶಾಸ್ತ್ರಿಗಳಿಗೆ ನನ್ನಲ್ಲಿ ಅನುಗ್ರಹ ಬುದ್ಧಿ ಇನ್ನೂ ಅಧಿಕವಾಯಿತು. ನನ್ನನ್ನು ಕಾವ್ಯ ಪರೀಕ್ಷೆಗೆ ಕಳುಹಿಸಲು ವೇ॥ ನಾರಾಯಣ ಶಾಸ್ತ್ರಿಗಳು ಪ್ರತ್ಯೇಕವಾಗಿ ಪರೀಕ್ಷಾ ಸಿದ್ಧತೆಗಾಗಿ ಪಾಠ

ಹೇಳುತ್ತಿದ್ದರು. ಬೆಂಗಳೂರಲ್ಲಿ ಪರೀಕ್ಷಾಕೇಂದ್ರ, ಪರೀಕ್ಷೆಗೆ ಹೋದೆ. ಬೆಂಗಳೂರಿಗೆ ಆಗಲೇ ಪ್ರಥಮ ಪ್ರವೇಶವಾದದ್ದು. ಕಾವ್ಯ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾದೆ. ವ್ಯಾಕರಣದಲ್ಲಿ ನಾನೇ ಸಮಸ್ತ ವಿದ್ಯಾರ್ಥಿಗಳಿಗಿಂತ ಅಧಿಕ ಅಂಕ ಗಳಿಸಿದ್ದೆ. ನನ್ನ ಅಧ್ಯಾಪಕರಾದ ವೇ॥ ನಾರಾಯಣಶಾಸ್ತ್ರಿಗಳು ಆನಂದ ತುಂದಿಲರಾದರು. ಬೆಂಗಳೂರಿಗೆ ಹೋಗಿ ಮುಂದೆ ಪ್ರೌಢ ವಿದ್ಯಾಭ್ಯಾಸವನ್ನು ಮಾಡಬೇಕೆಂದು ನನ್ನನ್ನು ಪ್ರೋತ್ಸಾಹಿಸಿದರು. ಮನೆಯಲ್ಲಿಯೂ ಒಪ್ಪಿಗೆ ದೊರೆಯಿತು. ನಾನು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದೆ.

"ನನ್ನ ಸಾಧನೆ ಶ್ರೇಯಸ್ಸು ಏನಿದ್ದರೂ ಇದಕ್ಕೆ ಮೂಲ ಕಾರಣಭೂತರಾದವರು ವೇ॥ ನಾರಾಯಣಶಾಸ್ತ್ರಿಗಳು ಮತ್ತು ವೇ॥ ಕೇಶವಶಾಸ್ತ್ರಿಗಳು. ಅವರು ಹೇಳಿದ್ದು ಬಾಲ್ಯಪಾಠವೇ ಆಗಿದ್ದರೂ ನನ್ನ ಭವಿಷ್ಯಕ್ಕೆ ತಳಹದಿಯನ್ನು ಹಾಕಿ ಪ್ರೋತ್ಸಾಹಿಸಿದ ಪುಣ್ಯಾತ್ಮರು ಅವರು. ಅವರು ನನ್ನ ಹೃದಯದಲ್ಲಿ ಸದಾ ನೆಲೆಸಿರುತ್ತಾರೆ."

ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದ ಯುವಕ ರಂಗನಾಥಶರ್ಮರು ಶ್ರೀಜಯಚಾಮರಾಜೇಂದ್ರ ಕಾಲೇಜನ್ನು ಸೇರಿದರು. ಆಗ ಅವರಿಗೆ ಯೌವ್ವನದಲ್ಲಿ ಸಹಜವಾಗಿ ಮೂಡಿಬರುವ ಮನೋದಾರ್ಢ್ಯ, ಧೈರ್ಯ, ಸ್ಥೈರ್ಯಗಳಲ್ಲದೆ ಬೇರೆ ಏನೂ ಇರಲಿಲ್ಲ. ಊಟ ವಸತಿಗಾಗಿ ಸಹ ಹಣ ಕೊಟ್ಟು ಅಭ್ಯಾಸಮಾಡುವ ಅನುಕೂಲ ಇರಲಿಲ್ಲ. ಎಂಟು ವರ್ಷಕಾಲ ಅವರು ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಯನ ಮಾಡಿ ಪದವೀಧರರಾದುದು ಅವರ ಅದಮ್ಯ ವಿದ್ಯಾಕಾಂಕ್ಷೆ, ಸ್ಥೈರ್ಯ, ಧೈರ್ಯ ಸಹನೆಗಳಿಂದ ಮಾತ್ರ. ಮೊದಲು 2 ವರ್ಷ ಕಾಲ ಅವರು ಅವರಿವರ ಮನೆಗಳಲ್ಲಿ ವಾರಾನ್ನ ಮಾಡಿಕೊಂಡು ಜೀವಿಸಿದ್ದರು. ವ್ಯಾಸಮಂದಿರದಲ್ಲಿ ವಾಸ. ಅಷ್ಟರಲ್ಲಿ ಅವರ ಮುಖ ಮೈಗಳಲ್ಲಿ ಎಕ್ಸಿಮ ಚರ್ಮರೋಗವು ಕಾಣಿಸಿ ಕೊಂಡಿತು. ಕ್ರಮೇಣ ಅದು ನಖಶಿಖಾಂತವಾಗಿ ಕೆನ್ನೆ, ಕಿವಿ, ಕಣ್ಣುರೆಪ್ಪೆಗಳಿಗೂ ಸಹ ವ್ಯಾಪಿಸಿಕೊಂಡಿತು. ಈ ಸ್ಥಿತಿಯಲ್ಲಿ ವಾರಾನ್ನದ ಮನೆಗಳಿಗಾಗಲೀ, ಕಾಲೇಜಿಗಾಗಲೀ ಹೋಗುವುದಾದರೂ ಹೇಗೆ ? ಜನ ಕಣ್ಣರಳಿಸಿ ನೋಡಿ ದೂರ ಮಾಡುವುದನ್ನೂ ಲೆಕ್ಕಿಸದೆ ವಿದ್ಯಾಭ್ಯಾಸವನ್ನು ತಪ್ಪಿಸಲಿಲ್ಲ. ಸ್ವತಃ ಅಡಿಗೆ ಮಾಡಿಕೊಂಡು ಊಟ ಮಾಡಲು ಪ್ರಾರಂಭಿಸಿದರು. ಕೈಲಿ ಇಕ್ಕಳ ಹಿಡಿದು ಅಡಿಗೆ ಮಾಡಿಕೊಂಡು ಚಮಚದಿಂದ ತಿನ್ನುತ್ತಿದ್ದರು. ಕಾಲೇಜಿಗೆ ಹೋಗಿರಲಿ, ಬಿಡಲಿ ದಿನ ದಿನದ ಪಾಠ ಕ್ರಮವನ್ನು ಅನುಸರಿಸಿ ಅಭ್ಯಾಸ ಮುಂದುವರಿಸಿದರು. ಮೂರು ವರ್ಷಕಾಲ ಉಪ್ಪು, ಹುಳಿ, ಖಾರ, ಮಸಾಲೆಗಳನ್ನು ಪೂರ್ತಿಬಿಟ್ಟು ಬರಿ ಸಪ್ಪೆಯನ್ನೇ ಉಂಡು ಕಠೋರ ಪಥ್ಯ ಮಾಡಿದರು. ಅದು ಒಂದು ಸಾಧನೆ ಮತ್ತು ತಪಸ್ಸು ಎಂದೇ ಹೇಳಬೇಕು. ದೇಹಕ್ಕೆ ಅವಶ್ಯಕವಾದ ಪೌಷ್ಠಿಕಾಂಶ ಸಿಗದೆ ಆಗಾಗ ಅತಿಸಾರವ್ಯಾಧಿ ಸಹ ಕಾಣಿಸಿಕೊಂಡಿತ್ತು. ಹಲವು ದಿನ ಅವರಿಗೆ ಹಸಿವು ನಿದ್ರೆಗಳು ಏನೆಂಬುದೇ ತಿಳಿಯದಾಯಿತು. ಒಂದೆ ಕಡೆ ಗುಣವಾಗಲಾರ

ದೆಂಬತಹ ರೋಗ, ಮತ್ತೊಂದು ಕಡೆ ಬಡತನದ ಬವಣೆ, ತನ್ನ ಹೃನ್ಮನಸುಗಳಿಗೆ ತೃಪ್ತಿಯಾಗುವಂತೆ ವಿದ್ಯಾಭ್ಯಾಸ ಮಾಡಲಾಗದಂಥ ಚಿಂತೆ, ಈ ಮೂರೂ ಸೇರಿ ಶಕ್ತಿಮೀರಿ ಅವರನ್ನು ಒಂದೊಂದು ಕಡೆಯಿಂದ ಜಗ್ಗಿ ಹಿಂಸಿಸಿದರೂ ಅವರು ತಮ್ಮ ವಿದ್ಯಾಭ್ಯಾಸ ಮತ್ತು ಸಂಸ್ಕೃತ ಅಧ್ಯಯನದಿಂದ ವಿಚಲಿತರಾಗಲಿಲ್ಲ. ಈ ಜಗತ್ತಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ತನ್ನಷ್ಟು ರೋಗರುಜಿನಗಳನ್ನು ಅನುಭವಿಸಿದವರು ಯಾರೂ ಇರಲಿಕ್ಕಿಲ್ಲ ಎಂಬ ಭಾವನೆ ಅವರಿಗೆ ಬಂದಿದ್ದರೆ ಅದು ಅತ್ಯಂತ ಸಹಜವಾದುದೆ ! ಇಂತಹ ದಾರುಣ ಪರಿಸ್ಥಿತಿಯಲ್ಲಿ ಅವರು ಜೀವ ಹಿಡಿದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ನಿರ್ಧರಿಸಿಕೊಂಡ ಗುರಿಯನ್ನು ತಲುಪಿದುದು ಮಾನವನ ತಾಳ್ಮೆಗೆ, ಮನೋದಾರ್ಢ್ಯಕ್ಕೆ ಒಂದು ಉನ್ನತ ನಿದರ್ಶನ ಎಂದು ಹೇಳಬಹುದು. ತಾಳಿದವನು ಬಾಳಿಯಾನು ಎಂಬ ಗಾದೆ ಮಾತನ್ನು ಸ್ಥಿರಪಡಿಸಿದವರು ಯುವಕ ರಂಗನಾಥಶರ್ಮ.

ಶ್ರೀ ಜಯಚಾಮರಾಜೇಂದ್ರ ಕಾಲೇಜಿನಲ್ಲಿ ಎಂಟು ವರ್ಷಗಳ ಕಾಲ ಶ್ರದ್ಧೆಯಿಂದ ಅಧ್ಯಯನ ಮಾಡಿ ಶ್ರೀರಂಗನಾಥಶರ್ಮರು ಸಂಸ್ಕೃತ ಭಾಷೆಯಲ್ಲಿ ವ್ಯಾಕರಣ ಶಾಸ್ತ್ರ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ 'ವಿದ್ವತ್' ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಆಗಿದ್ದಾರೆ. ಸಂಸ್ಕೃತದಲ್ಲಿ ಈ ಎರಡೂ ಪರೀಕ್ಷೆಗಳು ಉಚ್ಚಮಟ್ಟದ್ದು. ಸಂಸ್ಕೃತ ಎಂದರೆ ಕಬ್ಬಿಣದ ಕಡಲೆ ಎಂಬ ಮಾತು ನಮ್ಮ ಜನರಲ್ಲಿ ಪ್ರಚಲಿತವಾಗಿದೆ. ಈ ಕಬ್ಬಿಣದ ಕಡಲೆಯನ್ನು ತಿಂದು ಅರಗಿಸಿಕೊಂಡ ಅದಮ್ಯ ಶಕ್ತಿ ಶ್ರೀರಂಗನಾಥ ಶರ್ಮರದು. ವ್ಯಾಕರಣ ಶಾಸ್ತ್ರದ ಪ್ರೊಫೆಸರ್ ಆಗಿದ್ದ ವಿದ್ವಾನ್ ವೇ|| ಬ್ರ|| ನು. ಸೊ. ತಿರುನಾರಾಯಣ ಅಯ್ಯಂಗಾರ್ ಅವರನ್ನು ಶರ್ಮ ಈಗಲೂ ನೆನಪಿಸಿಕೊಳ್ಳುತ್ತಾರೆ. ಆಪತ್ತಿಗೆ ಆದವರನ್ನು ಮರೆಯಲಾದೀತೆ? ಮಾನವ ಧರ್ಮವನ್ನು ಅರಿತವರು ಶ್ರೀರಂಗನಾಥಶರ್ಮ.

ಅಷ್ಟೊಂದು ರೋಗ ರುಜಿನಗಳಿಂದ ಬಳಲಿದರೂ ಶ್ರೀರಂಗನಾಥಶರ್ಮ ಸಾಮೂಹಿಕ, ಸಾಂಘಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ದೂರ ಆದವರಲ್ಲ. ಮನುಷ್ಯನು ಮನುಷ್ಯರ ಸ್ನೇಹಾದರಗಳಿಂದ ತಾನು ತಾಳ್ಮೆ ಸಹಿಷ್ಣುತೆ ಮತ್ತು ಸಂತೃಪ್ತಿಯನ್ನು ಪಡೆಯಬಹುದು ಎನ್ನುತ್ತಾರೆ ಅನುಭವಿಯಾದ ಶ್ರೀರಂಗನಾಥಶರ್ಮ. ಇವರು ನಾಲ್ಕು ವರ್ಷ ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ಕಾರ್ಯದರ್ಶಿ ಆಗಿದ್ದರು. ಸಂಘದ ವತಿಯಿಂದ ಪಲವು ಉಪನ್ಯಾಸಾದಿ ಕಾರ್ಯಕ್ರಮಗಳನ್ನೂ ಯಶಸ್ವಿಯಾಗಿ ಏರ್ಪಡಿಸಿದ್ದರು. ವ್ಯಾಸಮಂದಿರಂ ಎಂಬ ವಿದ್ಯಾರ್ಥಿ ವಸತಿಗೃಹದಲ್ಲಿ 4 ವರ್ಷಕ್ಕೂ ಹೆಚ್ಚುಕಾಲ ಸಕ್ರಿಯರಾದ ಮೇಲ್ವಿಚಾರಕ (ಪ್ರಿಫೆಕ್ಟ್) ಆಗಿದ್ದರು. ವ್ಯಾಸಮಂದಿರದಲ್ಲಿ ಪ್ರತಿಯೊಂದು ಪಕ್ಷದಲ್ಲಿಯೂ ಪ್ರದೋಷ ಪೂಜೆ, ಅಂತ್ಯಾಕ್ಷರಿ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿ ಸಂತೋಷಪಡುತ್ತಿದ್ದರು. "ಸುಖ ದುಃಖೇ ಸಮೇಕೃತ್ವಾ, ಸಮದುಃಖ ಸುಖಃ

ಸ್ವಸ್ಥಃ" ಎಂಬ ಹಿತನುಡಿಯನ್ನು ಆಚರಣೆಯಲ್ಲಿ ತಂದುಕೊಂಡವರು. ವೈಯಕ್ತಿಕ ದಾರುಣ ಸಮಯದಲ್ಲಿಯೂ ಸಾಂಘಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂತೋಷಿಸುವ ಪ್ರವೃತ್ತಿ ಇದ್ದ ರಂಗನಾಥಶರ್ಮರಲ್ಲಿ ಅವರದೇ ಆದ ಒಂದು ಅನುಕರಣೀಯ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವನ್ನು ಕಾಣಬಹುದು.

ಕಾಲೇಜಿನ ವ್ಯಾಸಂಗ ಮುಗಿದ ಅನಂತರ ಶ್ರೀರಂಗನಾಥಶರ್ಮರು ಮೊದ ಮೊದಲು ಪ್ರೌಢಶಾಲೆಯಲ್ಲಿ ಸಂಸ್ಕೃತ ಮತ್ತು ಕನ್ನಡ ಬೋಧಕರಾಗಿದ್ದರು. ತಾವು ಕಲಿತ ವಿದ್ಯೆಯ ಮಟ್ಟಕ್ಕೆ ತಾವು ಮಾಡುತ್ತಿರುವ ಕಾರ್ಯದರ್ಜೆಯಲ್ಲಿ ಕಿರಿದು ಎಂದು ಭಾವಿಸಿದವರಲ್ಲ. ಹಿಡಿದ ಕಾರ್ಯವನ್ನು ಹೃತ್ಪೂರ್ವಕ ಶ್ರದ್ಧೆಯಿಂದ ಮಾಡಬೇಕೆಂಬುದು ಅವರ ಧ್ಯೇಯ, ಇಂದಿಗೂ ಸಹ. ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ ಎರಡು ವರ್ಷ ಅಧ್ಯಾಪಕರಾಗಿದ್ದರು. ಅನಂತರ 1948ರಿಂದ 1976ರವರೆಗೆ 28 ವರ್ಷಕಾಲ ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರ ಮತ್ತು ಅಲಂಕಾರಶಾಸ್ತ್ರದ ಅಧ್ಯಾಪಕರಾಗಿದ್ದರು. ಪ್ರೊಫೆಸರಾಗಿ ನಿವೃತ್ತರಾದರು. ಆ ಮಧ್ಯೆ 6 ತಿಂಗಳು ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು.

ಶ್ರೀರಂಗನಾಥಶರ್ಮ ಸಮರ್ಥ ಅಧ್ಯಾಪಕ ಒಂದೇ ಅಲ್ಲ, ಸರಸ ಸಂಭಾಷಣಾಕಾರ, ವಿದ್ವತ್ ಪೂರಿತವಾಗ್ಮಿ, ಹೆಸರಾಂತ ಬರಹಗಾರ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದಲೂ, ಅನೇಕ ಸಾರ್ವಜನಿಕ ಸಂಘ-ಸಂಸ್ಥೆಗಳಿಂದಲೂ ಸಂಮಾನಿತರು. ಆದಿಚುಂಚನಗಿರಿಯಲ್ಲಿ ನಡೆದ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ತಿನ ಪಂಚಮ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದರು. ಉಜ್ಜಯನಿಯಲ್ಲಿ ನಡೆದ ಕಾಳಿದಾಸ ಸಮಾರೋಹದಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದರು. ಧಾರವಾಡದಲ್ಲಿ ನಡೆದ ಓರಿಯಂಟಲ್ ಕಾನ್‌ಫರೆನ್ಸ್, ತಿರುಪತಿಯಲ್ಲಿ ನಡೆದ ಕೇಂದ್ರ ಸಂಸ್ಕೃತ ವಿದ್ಯಾಲಯದ ವಿದ್ವನ್ಮಣಿಗಳ ಸಭೆಗಳಲ್ಲಿ ಆಹ್ವಾನಿತ ಅತಿಥಿಯಾಗಿ ಭಾಷಣ ಮಾಡಿದ್ದಾರೆ. ಪ್ರಬಂಧ ಗಳನ್ನು ಮಂಡಿಸಿದ್ದಾರೆ. ಮದ್ರಾಸಿನಲ್ಲಿ ಮಹಾಮಹೋಪಾಧ್ಯಾಯ ಕುಪ್ಪುಸ್ವಾಮಿ ಶಾಸ್ತ್ರಿಗಳ ಹೆಸರಿನಲ್ಲಿ ನಡೆದ ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ. ನವದೆಹಲಿಯ ಆಕಾಶವಾಣಿಯ ಆಹ್ವಾನದ ಮೇಲೆ ಅಲ್ಲಿ ಸಂಸ್ಕೃತ ಕವಿತಾ ಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ. ಇಂತಹ ಕಾರ್ಯಕ್ರಮಗಳು ಇನ್ನೂ ಎಷ್ಟೋ ಇವೆ. ಆದರೆ ಅವರಾಗಿ ಹೇಳಿಕೊಳ್ಳುವುದು ಕಡಿಮೆ.

ಲೇಖಕರಾಗಿ ಶ್ರೀರಂಗನಾಥಶರ್ಮರ ಸೇವೆ ವಿಪುಲವಾದುದು, ಚಿರಂಜೀವಿ ಆದುದು. ಅವರು ಬರೆದು ಮುದ್ರಿತವಾದ ಗ್ರಂಥಗಳು 55ಕ್ಕೂ ಹೆಚ್ಚು ಇವೆ. ಮುಖ್ಯವಾಗಿ ಹೆಸರಿಸಬೇಕಾದವುಗಳು :

1) ವಾಲ್ಮೀಕಿ ರಾಮಾಯಣದ 7 ಕಾಂಡಗಳ ಕನ್ನಡಾನುವಾದ 8 ಸಂಪುಟಗಳಲ್ಲಿ
2) ವಿಷ್ಣು ಪುರಾಣ—2 ಸಂಪುಟಗಳಲ್ಲಿ ಪೂರ್ಣ
3) ಭಾಗವತದ 10, 11, 12ನೇ ಸ್ಕಂಧಗಳ ಅನುವಾದ 3 ಸಂಪುಟಗಳಲ್ಲಿ
4) ಶ್ರುತಿಸಾರ ಸಮುದ್ಧರಣ.
5) ಸಂಸ್ಕೃತ ಜೈಮಿನಿ ಭಾರತದ ಅನುವಾದ
6) ಅಮರಕೋಶ ಕನ್ನಡ ವ್ಯಾಖ್ಯಾನ
7) ಸೂಕ್ತಿ–ವ್ಯಾಪ್ತಿ
8) ಸಂದರ್ಭ ಸೂಕ್ತಿ
9) ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿ
10) ಶ್ರೀರಾಮಚಂದ್ರ
11) ಬಾಹುಬಲಿ ವಿಜಯ (ಸಂಸ್ಕೃತ ನಾಟಕ)
12) ಏಕಚಕ್ರಂ (ಸಂಸ್ಕೃತ ನಾಟಕ)
13) ಮೂರು ಸುಪ್ರಭಾತಗಳು : ಶ್ರೀರಾಮ, ಗೋಮಟೇಶ್ವರ ಮತ್ತು ಕುಕ್ಕೆ ಸುಬ್ರಹ್ಮಣ್ಯ
14) ಹದಿಮೂರು ಹಳೆಗನ್ನಡ ಕಾವ್ಯಗಳ ಅನುವಾದಕಾರ್ಯದಲ್ಲಿ ನೆರವು, ಕನ್ನಡ ಸಾಹಿತ್ಯ ಪರಿಷತ್ತಿನ ಏರ್ಪಾಡಿನಿಂದ
15) ಹೊಸಗನ್ನಡ ವ್ಯಾಕರಣ
16) ನಿಪಾತಾರ್ಥ ನಿರ್ಣಯ (ಸಂಸ್ಕೃತ) ಅಲ್ಲದೆ ಇನ್ನೂ ಹಲವು ಚಿಕ್ಕ ಪುಟ್ಟ ಇವೆ. "ವಿಶ್ವಾಮಿತ್ರ" ಎಂಬ ಕಾವ್ಯನಾಮದಿಂದ (ಉತ್ಥಾನ) ಮಾಸಪತ್ರಿಕೆಯಲ್ಲಿ ಕಳೆದ 12 ವರ್ಷಗಳಿಂದ ಸೂಕ್ತಿ–ವ್ಯಾಪ್ತಿ ಎಂಬ ಶೀರ್ಷಿಕೆಯಲ್ಲಿ ಅರ್ಥವಾಕ್ಯಗಳನ್ನು ಬರೆಯುತ್ತಿದ್ದಾರೆ.

ಶ್ರೀರಂಗನಾಥಶರ್ಮರ ಕನ್ನಡ ಅನುವಾದದ ವಾಲ್ಮೀಕಿ ರಾಮಾಯಣದ ಭಾಷೆ, ಶೈಲಿ, ಅರ್ಥ, ಭಾವಗಳಲ್ಲಿ ಅವರದೇ ಆದ ಛಾಪು ಬಿದ್ದಿದೆ. ಪಂಡಿತ–ಪಾಮರ ರೀರ್ವರನ್ನೂ ಸಮನಾಗಿ ಆಕರ್ಷಿಸುತ್ತದೆ, ತೃಪ್ತಿ ಪಡಿಸುತ್ತದೆ. ಅವುಗಳಲ್ಲಿ ಅವರ ಹೃದಯಕ್ಕೆ ಹತ್ತಿರವಾದುದು ಸುಂದರಕಾಂಡ ಎಂದು ನನ್ನ ಅನಿಸಿಕೆ. ವಾಲ್ಮೀಕಿ ರಾಮಾಯಣದ ಏಳೂ ಕಾಂಡಗಳನ್ನೂ ಅನುವಾದಿಸಲು ತಮಗೆ ಮೂರು ವರ್ಷಗಳು ಸಾಕಾದರೂ, ಪ್ರಕಾಶಕರ ಅನಾನುಕೂಲಗಳಿಗೆ ಹೊಂದಿಕೊಳ್ಳುವುದು ತೀರ ಅವಶ್ಯಕ ವಾದುದರಿಂದ ಎಂಟು ವರ್ಷಗಳು ಬೇಕಾಯಿತು, ಅದರ ಪ್ರಕಟನೆಗೆ ಎನ್ನುತ್ತಾರೆ. ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಅನುವಾದಿಸಲು ಮೂಲ ಪ್ರೇರಕರಾದವರು ದಿವಂಗತ ಡಾ॥ ಡಿ.ವಿ.ಜಿ.ಯವರು. ಅನಂತರ ಸ್ವತಃ ಸಂಸ್ಕೃತ ವ್ಯಾಕರಣ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ ಪಂಡಿತರಾದ ಶ್ರೀರಂಗನಾಥಶರ್ಮರಿಗೆ ವಾಲ್ಮೀಕಿ

ರಾಮಾಯಣದ ಸೌಂದರ್ಯವೇ ಪ್ರಚೋದಿಸಿ ಅನುವಾದ ಕಾರ್ಯವನ್ನು ಸಂಪೂರ್ಣಗೊಳಿಸಿತು. ವಾಲ್ಮೀಕಿಯ ಭಾವ ವಿಚಾರಧಾರೆಗಳ ಅಂತರಾರ್ಥ ಸೌಂದರ್ಯಗಳ ಸ್ವಾರಸ್ಯವನ್ನು ತಿಳಿಯಲು ಅವರೇ ವಿವರಿಸಬೇಕು. ಕೇಳುವವರ ಮೇಲೆ ಅದು ಹೆಚ್ಚು ಪರಿಣಾಮಕಾರಿ.

ಮೂವತ್ತೈದು ವರ್ಷಗಳಿಗೂ ಹೆಚ್ಚುಕಾಲ ಅಧ್ಯಾಪಕ ವೃತ್ತಿಯಲ್ಲಿದ್ದ ಶ್ರೀರಂಗನಾಥಶರ್ಮರೊಡನೆ ಪ್ರಸ್ತುತ ವಿದ್ಯಾಭ್ಯಾಸದ ಪದ್ಧತಿ, ವ್ಯವಸ್ಥೆ ಮತ್ತು ಪಾಠ ಕ್ರಮಗಳನ್ನು ಕುರಿತು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯಿಂದ ಕೆಲವು ಪ್ರಶ್ನೆಗಳನ್ನು ಅವರ ಮುಂದಿಟ್ಟೆ.

● "ಕನ್ನಡ, ಸಂಸ್ಕೃತ ಅಥವಾ ಇಂಗ್ಲಿಷ್ ಈ ಭಾಷೆಗಳಲ್ಲಿ ಇಂದಿನ ವಿದ್ಯಾಭ್ಯಾಸದ ರೀತಿ, ನೀತಿ, ಪದ್ಧತಿ ವ್ಯವಸ್ಥೆ ಮತ್ತು ಪಾಠ ಕ್ರಮಗಳನ್ನು ಕುರಿತು ನಿಮ್ಮ ಅಭಿಪ್ರಾಯವೇನು ?"

○ "ವೈಜ್ಞಾನಿಕ ವಿಷಯಗಳನ್ನು ಹೊರತುಪಡಿಸಿ ಭಾಷಾಧ್ಯಯನದ ವಿಷಯವಾಗಿ ಮಾತ್ರ ಹೇಳಬಲ್ಲೆ. ಕನ್ನಡ, ಇಂಗ್ಲಿಷ್ ಈ ಭಾಷೆಗಳ ಅಧ್ಯಯನ ಮತ್ತು ಜ್ಞಾನದ ಮಟ್ಟ ತುಂಬಾ ಕುಸಿದು ಹೋಗಿದೆ. ವಿದ್ಯಾರ್ಥಿಗಳಿಗೆ ಕಷ್ಟವಾಗಬಾರದು, ಮಾನಸಿಕ ಶ್ರಮ ಆಗದಿರಲಿ, ವಿದ್ಯಾರ್ಥಿಗಳ ತೇರ್ಗಡೆಯ ಸಂಖ್ಯೆಯನ್ನು ಮಾತ್ರ ಹೆಚ್ಚಿಸಬೇಕು ಎಂದಿಷ್ಟೇ ವಿದ್ಯಾ ಇಲಾಖೆಯವರ, ವಿದ್ಯಾಸಂಸ್ಥೆಗಳ ಘನೋದ್ದೇಶವಾಗಿ ಪರಿಣಮಿಸಿದೆ. ಈಗ ಸಂಸ್ಕೃತ ಭಾಷೆಗೂ ಮತ್ತು ಸಂಸ್ಕೃತದ ವಿಭಿನ್ನ ಶಾಸ್ತ್ರಗಳಿಗೂ ಈ ಸೋಂಕು ವ್ಯಾಪಿಸಿದೆ. ಈ ವಿಷಯಗಳಲ್ಲಿ ನಾವು ಹೆಮ್ಮೆ ಪಡಬೇಕಾದ ಸಾಧನೆ ಏನೂ ಇಲ್ಲ"

● "ಇಂದಿನ ವಿದ್ಯಾಭ್ಯಾಸ ಕ್ರಮವು ಬಾಲಕರ ಮತ್ತು ಯುವಕರ ಜ್ಞಾನಾಭಿವೃದ್ಧಿ, ಶೀಲನಿರ್ಮಾಣ ಮತ್ತು ಮಹಿಮಾಯುತ ವ್ಯಕ್ತಿತ್ವವನ್ನು ಯೋಗ್ಯವಾಗಿ ಬೆಳೆಸಲು ಸಾಧಕ ಆಗಿವೆಯೆ ?"

○ "ಸಂಸ್ಕೃತ ಶಾಲೆಗಳಲ್ಲಾಗಲೀ ಇತರ ಸಾರ್ವಜನಿಕ ವಿದ್ಯಾಸಂಸ್ಥೆಗಳಲ್ಲಾಗಲೀ ನಡೆಯುವ ವಿದ್ಯಾಭ್ಯಾಸ ಕ್ರಮದಲ್ಲಿ ಶೀಲ ನಿರ್ಮಾಣದ ಪ್ರಶ್ನೆಯೇ ಇಲ್ಲ. ನೀತಿ ಬೋಧನೆಗೆ ಅವಕಾಶವನ್ನೇ ಕಲ್ಪಿಸಿಲ್ಲ. ಮಹಿಮಾನ್ವಿತ ವ್ಯಕ್ತಿಯಾಗಿ ಬೆಳೆಯುವ ಚಿಂತನೆ ದೂರವೇ ಉಳಿದಿದೆ. ಆಯಾ ವಿಷಯಗಳಲ್ಲಿ ಸ್ವಲ್ಪ ಜ್ಞಾನಾಭಿವೃದ್ಧಿಗೆ ಅವಕಾಶ ಮಾತ್ರ ಇದೆ. ಬ್ರಿಟಿಷರ ಕಾಲದಲ್ಲಿ ಜ್ಞಾನಾಭಿವೃದ್ಧಿಗೆ ಅಧಿಕ ಸಾಧಕವಾದ ಪಾಠಕ್ರಮ ಇತ್ತು. ಈಗ ಅದೂ ಇಲ್ಲ."

● "ಇಂದಿನ ಸರ್ಕಾರಗಳು ನಿಯೋಜಿಸಿದ ಸಂಸ್ಕೃತ ವಿದ್ಯಾಭ್ಯಾಸದ ಪ್ರಕಾರ ಮತ್ತು ಪ್ರಚಾರಗಳನ್ನು ಕುರಿತು ನಿಮ್ಮ ಅಭಿಪ್ರಾಯವೇನು ?"

○ "ಇಂದು ನಮ್ಮ ಕರ್ನಾಟಕ ಸರ್ಕಾರವು ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಹಣವನ್ನೇನೋ ಒದಗಿಸಿದೆ. ಅಧ್ಯಾಪಕರ ಸಂಬಳ ಸಾರಿಗೆಗಳನ್ನು ಉತ್ತಮ ಪಡಿಸಿದೆ. ಆದರೆ ಹಣವನ್ನು ಒದಗಿಸಿ ತನ್ನ ಜವಾಬ್ದಾರಿ ಮುಗಿಯಿತೆಂದು ಕೈ ತೊಳೆದುಕೊಂಡರೆ ಯಾವ ಪ್ರಯೋಜನವೂ ಆಗುವುದಿಲ್ಲ. ಹಿಂದೆ ತಿಂಗಳಿಗೆ ರೂ. 30 ವೇತನ ಪಡೆಯುತ್ತಿದ್ದ ಅಧ್ಯಾಪಕರು ತುಂಬಾ ಆಸಕ್ತಿಯಿಂದ ಶ್ರದ್ಧೆಯಿಂದ ಪಾಠ ಹೇಳುತ್ತಿದ್ದರು. ಈಗ ತಿಂಗಳಿಗೆ 3000 ರೂ/-ವೇತನ ಪಡೆಯುತ್ತಿದ್ದರೂ ಹಿಂದಿನ ದಶಾಂಶದಷ್ಟು ಆಸಕ್ತಿ ಶ್ರದ್ಧೆಗಳು ಹೆಚ್ಚಿನ ಅಧ್ಯಾಪಕರುಗಳಲ್ಲಿಲ್ಲ. ಸರ್ಕಾರವು ಉಪೇಕ್ಷಾರೂಪದಲ್ಲಿ ಪ್ರೋತ್ಸಾಹವನ್ನೇ ಕೊಡುತ್ತಿದೆ. ಸಂಸ್ಕೃತ ಶಾಲೆಗಳಿಗೆ ಮೇಲ್ವಿಚಾರಣೆ ಇಲ್ಲವೆಂದರೂ ಸಲ್ಲುತ್ತದೆ. ಜಾತೀಯತೆಯ ಭೂತ ಈ ರಂಗದಲ್ಲಿಯೂ ಒಳಹೊಕ್ಕಿದೆ. ಸಂಸ್ಕೃತದ ವಿಷಯವಾಗಿ ಬರಿಯ ಮಾತಿನ ಪ್ರಚಾರವಿರಬಹುದೇ ಹೊರತು ಕ್ರಿಯಾರೂಪದಲ್ಲಿ ಅದರ ಅಭಿವ್ಯಕ್ತಿ ಆಗಿಯೇ ಇಲ್ಲ"

● "ಇಂದು ಭಾರತದಲ್ಲಿ ಸಂಸ್ಕೃತ ಭಾಷೆಗೆ ಒಂದು ಭದ್ರ ಬುನಾದಿ ಮತ್ತು ಭವಿಷ್ಯ ಇದೆ ಎಂದು ನಿಮಗೆ ಅನಿಸುತ್ತದೆಯೇ ?"

○ "ಭರತ ಖಂಡದಲ್ಲಿ ಸಂಸ್ಕೃತ ಭಾಷೆಗೆ ಭದ್ರವಾದ ಬುನಾದಿಯುಂಟು. ಅದು ಅನಾದಿ ಸಿದ್ಧವಾದದ್ದು. ತನ್ನ ಯೋಗ್ಯತಾಬಲದಿಂದಲೇ ಸ್ಥಾಪಿಸಿಕೊಂಡದ್ದು. ಸರ್ಕಾರವು ಹಾಕಿದ ಬುನಾದಿಯಲ್ಲ. ಅದನ್ನೀಗ ಹೆಮ್ಮರವನ್ನಾಗಿ ಬೆಳೆಸಬಹುದಿತ್ತು. ಆದರೆ ವಿಭಿನ್ನ ಕ್ಷುದ್ರ ಶಕ್ತಿಗಳು ಅಡ್ಡ ಬರುತ್ತಿವೆ. ಇಷ್ಟು ಮಾತ್ರ ನಿಜ. ಯಾರು ನೀರನ್ನೆರೆಯದಿದ್ದರೂ ಸಂಸ್ಕೃತವು ತನ್ನ ತೇಜೋವೀರ್ಯಗಳಿಂದ ಸದಾ ಹಚ್ಚಹಸಿರಾಗಿ ಇದ್ದೇ ಇರುತ್ತದೆ. ಕೆಲವು ವೇಳೆ ಚಿಗುರಬಹುದು. ಚಿಗುರನ್ನು ಕಡಿದರೂ ಅದರ ಚಿಗುರುವ ಶಕ್ತಿಯನ್ನು ಮಾತ್ರ ಯಾವ ಮಾನವ ಶಕ್ತಿಯೂ ತಡೆಯಲಾರದು. ನಾನು ಹೇಳಬಹುದಾದದ್ದು ಇಷ್ಟು. ಸಂಸ್ಕೃತ ಭಾಷೆಯಲ್ಲಿರುವ ವಾಙ್ಮಯವು ಅದ್ಭುತ ವಾದದ್ದು. ಭಾಷೆಯನ್ನು ಕುರಿತು ಕೆಲವು ಕಾವ್ಯ ಮತ್ತು ನಾಟಕಗಳನ್ನು ಓದಿಕೊಂಡರೆ ಸಂಸ್ಕೃತಾಧ್ಯಯನ ಮುಗಿಯುತ್ತದೆ ಎಂದು ಜನರು ತಿಳಿದುಕೊಂಡಿದ್ದಾರೆ. ಇದು ಸಂಪೂರ್ಣ ತಪ್ಪಾದ ಅಭಿಪ್ರಾಯ. ಶಾಸ್ತ್ರವಾಙ್ಮಯವೇ ಸಂಸ್ಕೃತದಲ್ಲಿ ಮುಖ್ಯವಾದದ್ದು. ತರ್ಕ, ವ್ಯಾಕರಣ, ಸಾಂಖ್ಯ, ಮೀಮಾಂಸ, ವೇದಾಂತಾದಿ ದರ್ಶನಗಳು ಅತ್ಯಂತ ಪ್ರೌಢವಾಗಿ ಬೆಳೆದು ವಿಸ್ತರಿಸಿಕೊಂಡಿವೆ. ಹಾಗೆಯೇ ಅಲಂಕಾರ ಶಾಸ್ತ್ರ ಸಹ. ಇವುಗಳನ್ನು ವ್ಯಾಸಂಗ ಮಾಡಿದವರನ್ನು ಮಾತ್ರ "ಸಂಸ್ಕೃತಜ್ಞ" ಎಂದು ನಾನು ತಿಳಿಯುತ್ತೇನೆ. ಇಂಥವರ ಸಂಖ್ಯೆ ವಿರಳವಾಗುತ್ತಿದೆ. ಈ ಶಾಸ್ತ್ರಾಧ್ಯಯನಗಳಿಗೆ ಪ್ರೋತ್ಸಾಹ ಕೊಡುವುದಕ್ಕಾಗಿ ವಿದ್ವಾಂಸರ ವಾಕ್ಯಾರ್ಥಗೋಷ್ಠಿಗಳು ಸೇರುತ್ತವೆ.

ಶೃಂಗೇರಿಯಲ್ಲಿ ಪ್ರತಿ ವರ್ಷವೂ ಶ್ರೀ ಜಗದ್ಗುರುಗಳು ಈ ವಿದ್ವದ್‌ಗೋಷ್ಠಿಯನ್ನು ಏರ್ಪಡಿಸುತ್ತಿದ್ದಾರೆ. ಕನ್ನಡ ನಾಡಿನಲ್ಲಿ ನಡೆಯುತ್ತಿರುವ ಗೋಷ್ಠಿ ಇದೊಂದೇ. ಮಂತ್ರಾಲಯದ ಶ್ರೀಗಳವರೂ ವರ್ಷಕ್ಕೆ ಎರಡು ಬಾರಿ ಇಂಥಾ ಗೋಷ್ಠಿಯನ್ನೇ ಮಂತ್ರಾಲಯದಲ್ಲೂ ನಡೆಸುತ್ತಾರೆ. ಭರತ ಖಂಡದ ವಿವಿಧ ಸ್ಥಳಗಳಿಂದ ವಿಖ್ಯಾತ ವಿದ್ವಾಂಸರು ಆಗಮಿಸುವರು. ನಾನೂ ಭಾಗವಹಿಸುತ್ತಿದ್ದೇನೆ. ಅಲ್ಲಿ ನಡೆಯುವ ವಾಕ್ಯಾರ್ಥಗಳು ವಿದ್ವಾಂಸರ ಪಾಂಡಿತ್ಯಕ್ಕೆ ಒರೆಗಲ್ಲಾಗುತ್ತವೆ. ಈ ಬಗೆಯ ಗೋಷ್ಠಿಗಳು ಆಂಧ್ರ ಪ್ರದೇಶದಲ್ಲಿಯೂ, ಕಾಶೀಪ್ರಾಂತ್ಯದಲ್ಲಿಯೂ ನಡೆಯುತ್ತವೆ. ಇಂತಹ ಗೋಷ್ಠಿಗಳಲ್ಲಿ ಭಾಗವಹಿಸುವ ವಿದ್ವಾಂಸರ ಪಾಂಡಿತ್ಯವು ಸ್ವಯಂಪ್ರೇರಿತವಾಗಿ ಬಂದದ್ದು. ಇಂಥ ಗೋಷ್ಠಿಗಳನ್ನು ಉಳಿಸಿ ನಡೆಸಿಕೊಂಡು ಹೋಗಲು ಸರ್ಕಾರ ಪ್ರಯತ್ನಿಸುತ್ತಿಲ್ಲ. ಕೇವಲ ವಿದ್ಯಾಭಿಮಾನಿಗಳಿಂದ ಮಾತ್ರ ಇವು ಉಳಿದಿವೆ. ಇಂತಹ ಜ್ಞಾನ ಕುತೂಹಲಿಗಳು ನಮ್ಮ ರಾಷ್ಟ್ರದಲ್ಲಿ ಈಗಲೂ ಇದ್ದಾರೆ. ಆದುದರಿಂದಲೇ ಸಂಸ್ಕೃತದ ಬುನಾದಿ ಅನಾದಿಯಿಂದಲೂ ಸ್ವಯಂಸಿದ್ಧವೆಂದೂ ಸದಾ ಹಸಿರಾಗಿರ ಬಲ್ಲುದೆಂದೂ ನನ್ನ ಅಭಿಪ್ರಾಯ."

● "ಪ್ರಸ್ತುತ ಶತಮಾನದ ಮತ್ತು ಹಿಂದಿನ ಸಂಸ್ಕೃತ ಮತ್ತು ಕನ್ನಡ ಲೇಖಕರಲ್ಲಿ ನಿಮ್ಮ ಮೆಚ್ಚಿನ ಲೇಖಕರು ಯಾರು ?"

○ "ಪ್ರಾಚೀನ ಸಂಸ್ಕೃತ ಲೇಖಕರ ಪಟ್ಟಿ ಬಹಳ ದೊಡ್ಡದಾಗಬಹುದು. ವ್ಯಾಸ, ವಾಲ್ಮೀಕಿ, ಕಾಳಿದಾಸ, ಬಾಣಭಟ್ಟ, ಭಾಸ, ಭವಭೂತಿ ಇತ್ಯಾದಿ. ಹಾಗೆಯೇ ಶಾಸ್ತ್ರ ಗ್ರಂಥಗಳನ್ನು ರಚಿಸಿದವರೂ ವಿಪುಲವಾಗಿದ್ದಾರೆ. ಅವರೆಲ್ಲರೂ ನನಗೆ ಮೆಚ್ಚಿಕೆ ಯಾದವರೇ. ಪ್ರಸ್ತುತ ಶತಮಾನದಲ್ಲಿ ಸಂಸ್ಕೃತ ಲೇಖಕರು–ಉತ್ತಮ ಮಟ್ಟದವರು– ವಿರಳ. ಆದರೂ ಮಹಾರಾಷ್ಟ್ರದ ಅಪ್ಪಾಶಾಸ್ತ್ರಿಗಳು, ಪಂಡಿತ ಕ್ಷಮಾರಾವ್ ಎಂಬ ಕವಯಿತ್ರಿ ಇಬ್ಬರೂ ಸಹ ಉತ್ತಮ ಲೇಖಕರು.

"ಕನ್ನಡದ ಪ್ರಾಚೀನ ಕಾವ್ಯ ವಿಷಯವೂ ಅಷ್ಟೇ. ಕುಮಾರವ್ಯಾಸ, ಲಕ್ಷ್ಮೀಶ, ಪಂಪ ಮತ್ತು ರಾಘವಾಂಕ. ಪ್ರಸ್ತುತ ಶತಮಾನದ ಕನ್ನಡ ಲೇಖಕರಲ್ಲಿ ದಿವಂಗತ ಡಾ॥ ಡಿ. ವಿ. ಗುಂಡಪ್ಪನವರು ಮತ್ತು ವಿ. ಸೀತಾರಾಮಯ್ಯನವರು ನನಗೆ ಮೆಚ್ಚಿಕೆ ಯಾದವರು."

ಶ್ರೀರಂಗನಾಥಶರ್ಮರ ಭಾವ ವಿಚಾರಧಾರೆಗಳು ಅವರ ಸ್ವಂತ ಜೀವನಾನುಭವ ಗಳಲ್ಲಿ ಕಂಡ ಸುಖ, ದುಃಖ, ಕಷ್ಟ, ಕೊರತೆ, ಆಸೆ, ನಿರಾಸೆ ಮೊದಲಾದ ಮಾನವೀಯ ಜೀವನದ ನೋವು ನಲಿವುಗಳ ಸಂಘರ್ಷಣೆಯ ಒರೆಗಲ್ಲಿಗೆ ತಿಕ್ಕಿ ನೋಡಿ

ನಿರ್ಧರಿಸಿದವುಗಳು. ಸಂಸ್ಕೃತ ಭಾಷೆಯ ಕಾವ್ಯ ಮೀಮಾಂಸಾದಿ ನಿತ್ಯ ಶಾಶ್ವತ ಶ್ರೇಷ್ಠ ಗ್ರಂಥಗಳನ್ನು ಕೂಲಂಕಶವಾಗಿ ವಿಮರ್ಶಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿದುದರ ಫಲವಾಗಿ ಮೂಡಿ ಬೆಳೆದು ಬಂದವುಗಳು. ಅವುಗಳ ಮೇಲೆ ಪಕ್ಷಪಾತದ ನೆರಳು ಬಿದ್ದಿಲ್ಲ. ಅವುಗಳಲ್ಲಿ ಅಪಕ್ವತೆಯ ಲಕ್ಷಣಗಳಿಲ್ಲ. ಅಸಂಬದ್ಧಕ್ಕೆ ಆಸ್ಪದವಿಲ್ಲ.

ಆದರೂ, ಯಾರ ವಿಚಾರಧಾರೆಗಳೂ ಸಾರ್ವತ್ರಿಕ, ಸಾರ್ವಲೌಕಿಕ, ಸರ್ವವ್ಯಾಪಿ ಯಾಗಲಾರವು. ಅವು ಅವರವರ ವಿದ್ಯೆ, ಅನುಭವ, ಸಂಸ್ಕೃತಿಗಳನ್ನು ಅವಲಂಬಿಸಿದೆ ಎಂದು ಹೇಳಲೂ ಬೇಕಾಗುವುದು.

ಸಾಂಪ್ರದಾಯಿಕರೂ ಕರ್ಮನಿಷ್ಠರೂ ಆದ ತಾಯಿತಂದೆಯರ ಪೋಷಣೆಯಲ್ಲಿ ಮತ್ತೆ ಅದೇ ಪರಿಸರದಲ್ಲಿ ಬೆಳೆದ ಶ್ರೀ ರಂಗನಾಥ ಶರ್ಮರು ಐವತ್ತು ವರ್ಷಗಳ ಕಾಲ ಸಂಸ್ಕೃತಾಧ್ಯಯನ, ಅಧ್ಯಾಪನತಪಸ್ಸು, ಶುದ್ಧ ಸಾಂಪ್ರದಾಯಿಕ ಜೀವನ ನಡೆಸಿದುದರಿಂದ ಅವರ ಭಾವ ವಿಚಾರ ಧಾರೆಗಳು ಸಾಂಪ್ರದಾಯಿಕ ಆಗಿರುವುದು ಸಹಜವೆ. ಅವರ 'ಗೀತಾ ಪ್ರವಚನ' ಎಂಬ ಲೇಖನ ಮಾಲಿಕೆಯ ನಿವೇದನೆಯಲ್ಲಿ "ಸಾಂಪ್ರದಾಯಿಕ ಅರ್ಥವಿವರಣೆಯೇ ನಮಗೆ ಸಂಮತ. ಸಂಪ್ರದಾಯ ಪರಂಪರೆಯನ್ನು ಬಿಟ್ಟು ನೂತನವಾಗಿ ಶೋಧಿಸಿ ಹೇಳುವ ತಾತ್ಪರ್ಯಗಳ ಕಡೆ ನಮ್ಮ ಒಲವು ಪರಿಮಿತವೇ ಸರಿ" ಎಂದು ಹೇಳಿಕೊಂಡಿದ್ದಾರೆ. ಕಾವ್ಯ ಶಾಸ್ತ್ರಾರ್ಥಗಳ ವಿಷಯಗಳಲ್ಲಿ ಅವರ ವಿಚಾರಧಾರೆಗಳು ವಾದ ವಿವಾದಗಳಿಗೆ ಎಡೆ ಮಾಡಿಕೊಡದಷ್ಟು ಸ್ಪಷ್ಟವಾಗಿರುತ್ತದೆ. ಎಲ್ಲಾ ಸಂಪ್ರದಾಯಗಳಲ್ಲಿಯೂ ಅವರು ಗೌರವಬುದ್ಧಿ ಉಳ್ಳವರು. ಯಾವುದೇ ಮತತತ್ತ್ವಜ್ಞಾನವಾಗಲೀ, ಅವುಗಳ ವಿಷಯದಲ್ಲಿ ಜನತೆ ಇಡುವ ಶ್ರದ್ಧಾಭಕ್ತಿಗಳೇ ಮುಖ್ಯವಾದುದೆಂದು ಅವರ ಖಚಿತ ಅಭಿಪ್ರಾಯ. ಯಾರನ್ನಾದರೂ ವಾದದಿಂದ ಒಪ್ಪಿಸಬಹುದೆಂಬ ಅಭಿಪ್ರಾಯವನ್ನು ಅವರು ಒಪ್ಪಲಾರರು. ತಮ್ಮ ಬರಹಗಳಲ್ಲಿ ಪೂರ್ವಾಪರ ವಿಚಾರಧಾರೆಗಳನ್ನು ಪಂಡಿತಪಾಮರರಾದಿಯಾಗಿ ಎಲ್ಲರಿಗೂ ಮನ ಮುಟ್ಟುವಂತೆ ಅವಶ್ಯಕವಾದಷ್ಟು ಸರಳವಾಗಿ ಸಂಕ್ಷೇಪವಾಗಿ ಮಂಡಿಸುವುದೇ ಅವರ ಧ್ಯೇಯ ಎಂಬುದು ಅವರ ಕೃತಿಗಳನ್ನು ಅಧ್ಯಯನ ಮಾಡಿದವರಿಗೆ ಸ್ಪಷ್ಟವಾಗುತ್ತದೆ. ಕಾವ್ಯಗಳನ್ನು ಓದುವುದರಿಂದ ಮನಸ್ಸಿನ ಕಲ್ಮಶಗಳು ತೊಳೆದು ಹೋಗಿ ಶಾಂತವಾಗುವುದು ಎಂಬ ವಿಚಾರ ಅವರ ಅನುಭವಸಿದ್ಧ ನಂಬಿಕೆ. ತಮ್ಮ ಭಾವ ವಿಚಾರಗಳನ್ನು ಅವರು ವಿವರಿಸುವಾಗ ಮೇಲಿನ ವಿಚಾರಗಳನ್ನು ಪದೇ ಪದೇ ಹೇಳಿದುದುಂಟು. ವೇದಾಂತವು ತರ್ಕಾದಿ ಶಾಸ್ತ್ರಗಳಿಗಿಂತ ಮೇಲಾದುದು. ಶಾಸ್ತ್ರಗಳೆಲ್ಲವೂ ವೇದಾಂತ ಎಂಬ ಭವ್ಯ ಸೌಧಕ್ಕೆ ಮೆಟ್ಟಿಲುಗಳು ಮಾತ್ರ. ಉಪನಿಷತ್ ಸಿದ್ಧಾಂತಗಳೇ ವೇದಾಂತ ಎನ್ನಬಹುದು. ಇವು ಅವರ ವಿಚಾರಧಾರೆಯ ತಿರುಳು.

ಶ್ರೀ ರಂಗನಾಥ ಶರ್ಮರ ವೈಚಾರಿಕ, ವ್ಯಾವಹಾರಿಕ ಚಿಂತನೆಯ ವಿಶಾಲತೆ ಮತ್ತು ಗಂಭೀರತೆಗಳನ್ನು ತಿಳಿಯಬೇಕಾದರೆ ಅವರ "ಸಂದರ್ಭ ಸೂಕ್ತಿ" ಮತ್ತು "ಸೂಕ್ತಿ-ವ್ಯಾಪ್ತಿ" ಎಂಬ ಗ್ರಂಥಗಳನ್ನು ಮನನ ಮಾಡಬೇಕು. ಅವರ ಸಂಸ್ಕೃತ ಕೃತಿಗಳಲ್ಲೂ ಅವರ ವಿಚಾರಧಾರೆಯ ಸೃಜನಶೀಲ ವೈಶಿಷ್ಟ್ಯವನ್ನು ಕಾಣಬಹುದು. ನಿವೃತ್ತ ಸಂಸ್ಕೃತ ಪ್ರೊಫೆಸರ್ ಡಾ|| ಕೆ. ಕೃಷ್ಣಮೂರ್ತಿಯವರು—"Vidwan Sri N. Ranganatha Sharma whose erudition in SANSKRIT is equal to **his imaginative creativity** in that Medium" ಎಂದು ಬರೆದಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ರಂಗನಾಥ ಶರ್ಮರ ಕುಟುಂಬವನ್ನು ಕುರಿತು ಕೆಲವು ಮಾತುಗಳನ್ನು ಬರೆದರೆ ತಪ್ಪಾಗಲಾರದೆಂದು ಭಾವಿಸುತ್ತೇನೆ. ಅವರು 1941ರಲ್ಲಿ ವಿವಾಹವಾದರು. ಅವರ ಪತ್ನಿ ಶ್ರೀಮತಿ ಕಮಲಾಕ್ಷಮ್ಮನವರು ಸಹಧರ್ಮಿಣಿ ಎಂಬ ಶಬ್ದಕ್ಕೆ ಯೋಗ್ಯರೂ, ಅರ್ಹರೂ ಆಗಿದ್ದರು. ಅವರ ಅಕಾಲ ಮರಣ ಆ ಕುಟುಂಬಕ್ಕೆ ತುಂಬಲಾರದ ನಷ್ಟ. ಅವರು ಸಂಸಾರಕ್ಕೆ ಬಂದೊದಗುತ್ತಿದ್ದ ಕೊರತೆ ಕಷ್ಟಗಳನ್ನು ಧೈರ್ಯದಿಂದ ಮೌನವಾಗಿ ಎದುರಿಸಿ ಲೋಕ ವ್ಯವಹಾರಜ್ಞಾನದಿಂದ ಸಮರ್ಥರಾಗಿ ಅದನ್ನು ನಡೆಸಿಕೊಂಡು ಹೋಗುತ್ತಿದ್ದರು. ಮಕ್ಕಳ ಪಾಲನೆಯೊಂದಿಗೆ ಅವರ ಗುಣಶೀಲ ನಿರ್ಮಾಣದಲ್ಲಿ ಆ ತಾಯಿಯ ಪಾತ್ರ ಮೆಚ್ಚುವಂತಹುದು. ಶ್ರೀ ರಂಗನಾಥ ಶರ್ಮರ ಲೇಖನ ಮತ್ತು ಅಧ್ಯಯನ ವ್ಯವಸಾಯಕ್ಕೆ ಸ್ವಲ್ಪವೂ ಅಡೆತಡೆಯುಂಟಾಗದಂತೆ ಅವರು ನೀಡಿದ ಬೆಂಬಲ ಮತ್ತು ವ್ಯವಹಾರ್ಯ ಅನುಕೂಲಗಳು ನನ್ನ ಗಮನ ಸೆಳೆದ ಅಂಶ. ಶ್ರೀ ರಂಗನಾಥ ಶರ್ಮರು ಬರೆಯಲು ಕುಳಿತಿದ್ದಾಗ ಅವರ ಏಕಾಂತ ಮತ್ತು ಏಕಾಗ್ರತೆಗಳಿಗೆ ಭಂಗ ಬಾರದಂತೆ ಕುಶಲತೆಯಿಂದ ಮಕ್ಕಳನ್ನೂ, ಮನೆಗೆಲಸಗಳನ್ನೂ ಸ್ವಲ್ಪವೂ ಅತೃಪ್ತಿ ಇಲ್ಲದಂತೆ ನಡೆಸಿಕೊಳ್ಳುತ್ತಿದ್ದರು. ಮಕ್ಕಳಿಗೆ ತಾಯಿ ತಂದೆಯಲ್ಲಿರುವ ಗೌರವ, ಪ್ರೀತಿ, ವಿಶ್ವಾಸಗಳ ತಳಹದಿ ಗಟ್ಟಿಯಾಗಲು ತಾಯಿಯೇ ಕಾರಣ.

ಪರಿಪೂರ್ಣವಾದುದೂ, ಅನ್ಯೂನವಾದುದೂ ಯಾವುದೂ ಯಾರೂ ಇಲ್ಲ. ಕೆಲವು ಕುಂದುಕೊರತೆಗಳಿರುವುದು ಸಹಜವೆ. ಆದರೆ ತನ್ನ ಮತ್ತು ತನ್ನನ್ನು ಅವಲಂಬಿಸಿದವರ ಜೀವನವನ್ನು ತೃಪ್ತ ಮತ್ತು ಗಣನೀಯ ಮಟ್ಟದ ಸುಖ ಶಾಂತಿಗಳಿಂದ ನಡೆಸಿಕೊಂಡು ಹೋಗುವವರು ಪ್ರಶಂಸಾರ್ಹರು. ಇಂಥ ಪ್ರಶಂಸೆಗೆ ಅರ್ಹರಾದವರು ದಿವಂಗತ ಶ್ರೀಮತಿ ಕಮಲಾಕ್ಷಮ್ಮನವರು.

ಶ್ರೀ ರಂಗನಾಥ ಶರ್ಮರಿಗೆ ಇಬ್ಬರು ಗಂಡು ಮಕ್ಕಳೂ ಇಬ್ಬರು ಹೆಣ್ಣು ಮಕ್ಕಳೂ ಇದ್ದಾರೆ. ಹಿರಿಯ ಮಗ ಶ್ರೀ ಸದಾನಂದ ಸಿಂಡಿಕೇಟ್ ಬ್ಯಾಂಕಿನಲ್ಲಿ ಆಫೀಸರ್. ಕಿರಿಯ ಮಗ ಡಾ|| ನಾಗಭೂಷಣ ವೈದ್ಯಕೀಯ ಪದವೀಧರ. ಅವರ ಪತ್ನಿಯೂ ವೈದ್ಯಕೀಯ ಪದವೀಧರೆ. ಇಬ್ಬರೂ ಬೆಂಗಳೂರಿನ ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಹಿರಿಯ ಮಗಳು ಶ್ರೀಮತಿ

ಶಾರದೆಯು ಹಲವು ಉನ್ನತ ವೈದ್ಯಕೀಯ ಪದವಿ ಪಡೆದವರು. ಅವರ ಪತಿಯೂ ವೈದ್ಯರು. ಇಬ್ಬರೂ ತಮ್ಮ ಮಗಳೊಡನೆ ಯು.ಎಸ್.ಎ.ನಲ್ಲಿ ಇದ್ದಾರೆ. ಕಿರಿಯ ಮಗಳು ಶ್ರೀಮತಿ ಜಯಶ್ರೀ ಸಂಸ್ಕೃತ ಎಂ.ಎ.ಯಲ್ಲಿ ತೇರ್ಗಡೆಯಾಗಿ ಅಧ್ಯಾಪಕಿ ಯಾಗಿದ್ದು, ಈಗ ಪತಿಯೊಡನೆ ಯು.ಎಸ್.ಎ,ನಲ್ಲಿ ಇದ್ದಾರೆ.

ಈಗ 75 ವರ್ಷ ತುಂಬಿದ ಶ್ರೀ ರಂಗನಾಥ ಶರ್ಮರು, ತಮ್ಮ ಶ್ರಮದ ದುಡಿಮೆಯಿಂದಲೇ ಬೆಂಗಳೂರಿನ ವಿಜಯನಗರ ಬಡಾವಣೆಯಲ್ಲಿ ಕಟ್ಟಿದ ಸ್ವಂತ ಮನೆಯಲ್ಲಿ ಸಂಸಾರ ತಾಪತ್ರಯಗಳಿಂದ ದೂರಾಗಿ ತಮ್ಮ ಪ್ರವಚನ, ಲೇಖನ ವ್ಯವಸಾಯಗಳಿಂದ ಜನತೆಗೆ ಜ್ಞಾನದಾನ ಕಾರ್ಯದಲ್ಲಿ ತೊಡಗಿಕೊಂಡಿದಾರೆ. ಅವರಿಗೆ ದೇವರು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಡಲಿ ಎಂದು ಈ ಅಭಿನಂದನ ಸಮಾರಂಭ ಸಮಯದಲ್ಲಿ ಹಾರೈಸುತ್ತೇವೆ.

ಸಂಖ್ಯೆಯೇ ಪ್ರಧಾನವೆಂದಾಗ ಯಾರ ಸಂಖ್ಯೆ ಹೆಚ್ಚಿದೆಯೋ ಅವರೇ ಮಹಾಜನರು. ಜನರನ್ನು ಒಟ್ಟುಗೂಡಿಸಿ ಸಂಖ್ಯಾ ಬಲದಿಂದ ಮಹತ್ತ್ವವನ್ನು ತಂದು ಕೊಡತಕ್ಕದ್ದು ಜಾತಿ, ಮತ. 'ವೋಟು' ಎಂಬ ಶಬ್ದಕ್ಕೆ 'ಮತ' ಎಂದು ಭಾಷಾಂತರಿಸಿಕೊಟ್ಟವರ ಜಾಣ್ಮೆ ಮೆಚ್ಚತಕ್ಕದ್ದು. ಜಾತಿಯನ್ನು ಬಿಟ್ಟರೆ ಭಾಷೆ ಎರಡನೆಯ ಸ್ಥಾನವನ್ನು ಗಳಿಸಿಕೊಂಡಿದೆ.

—'ಸೂಕ್ತಿ-ವ್ಯಾಪ್ತಿ'ಯಲ್ಲಿ
**ಶ್ರೀ ರಂಗನಾಥ ಶರ್ಮರು**